ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 09-02-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಮಾಜಿ ಮುಖ್ಯಮಂತ್ರಿ ದಿವಂಗತ ಕೆಂಗಲ್ ಹನುಮಂತಯ್ಯನವರ 107 ನೇ ಜನ್ಮ ದಿನಾಚರಣೆ ಅಂಗವಾಗಿ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ:<br><br>ಮಾಲಾರ್ಪಣೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯ ಮಂತ್ರಿಗಳು,<br>ಕರ್ನಾಟಕ ಸರ್ಕಾರ | 10-02-2015<br>ಮಂಗಳವಾರ<br>ಬೆಳಿಗ್ಗೆ<br>9-30 ಗಂಟೆಗೆ | ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆ ಬಳಿ, ವಿಧಾನಸೌಧ, ಬೆಂಗಳೂರು. |
| 2 | **LOOMBA FOUNDATION LONDON** ನ ನಿಯೋಗದಿಂದ<br><br>ಶ್ರೀ ಕಾಗೋಡು ತಿಮ್ಮಪ್ಪ ವಿಧಾನ ಸಭಾಧ್ಯಕ್ಷರ ಭೇಟಿ | 10-02-2015<br><br>ಮಂಗಳವಾರ<br><br>ಬೆಳಿಗ್ಗೆ<br><br>10-00 ಗಂಟೆಗೆ | ಕೊಠಡಿ ಸಂಖ್ಯೆ 106<br>ಮೊದಲನೆ ಮಹಡಿ,<br>ವಿಧಾನ ಸೌಧ,<br>ಬೆಂಗಳೂರು |
| 3 | **Workshop on Road Safety Awarness Programme:**<br><br>**Inauguration:**<br><br>**Dr. Ramegowda, Commissioner for Transport & Road Safety** | **10-02-2015<br>Tuesday<br>11.00 A.M.** | **R.V. College of Engineering<br>Mysore Road,<br>Bangalore** |

| | | | |
|---|---|---|---|
| 4 | ಮಲೆಗಳಲ್ಲಿ ಮದುಮಗಳು ನಾಟಕದ ಎರಡನೇ ಸರಣಿ ಪ್ರದರ್ಶನದ  ಸಿದ್ಧತೆ ಕುರಿತು ಪತ್ರಿಕಾ ಗೋಷ್ಠಿ.<br><br>ಶ್ರೀ ಕೆ. ದಯಾನಂದ್, ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ.<br><br>ಶ್ರೀ ಎನ್. ಆರ್. ವಿಶುಕುಮಾರ್, ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ<br><br>ಶ್ರೀಸಿ.ಬಸವಲಿಂಗಯ್ಯ, ನಿರ್ದೇಶಕರು, ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರ | 10–02–2015<br>ಮಂಗಳವಾರ<br>ಬೆಳಿಗ್ಗೆ<br>11–30 ಗಂಟೆಗೆ | ಅಂತರಂಗ,<br>ಕನ್ನಡ ಭವನ,<br>ಜೆ.ಸಿ ರಸ್ತೆ |

**ನಿರ್ದೇಶಕರ ಪರವಾಗಿ**

## <u>ವಿಧಾನ ಮಂಡಲದ ಕಾರ್ಯಕಲಾಪಗಳು :</u>

## <u>ಪತ್ರಿಕಾ ಪ್ರಕಟಣೆ</u>

## <u>ಬಸ್ ದರ ಇಳಸಿದರೆ ನಾಲ್ಕು ಸಂಸ್ಥೆಗಳಗೆ ನಷ್ಟ</u>

**ಬೆಂಗಳೂರು, ಫೆಬ್ರವರಿ ೯ (ಕರ್ನಾಟಕ ವಾರ್ತೆ)**

ಮತ್ತೊಮ್ಮೆ ಬಸ್ ದರವನ್ನು ಇಳಿಸಿದರೆ ಸಾರಿಗೆ  ಇಲಾಖೆಯ ನಾಲ್ಕು ಸಂಸ್ಥೆಗಳು ನಷ್ಟಕ್ಕೆ ಒಳಗಾಗುತ್ತವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಇ. ಕೃಷ್ಣಪ್ಪ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಕೆ.ಎಸ್.ಆರ್.ಟಿ.ಸಿ. ಯಲ್ಲಿ ಏಳು ವರ್ಷದಿಂದ 745 ಕೋಟಿ ರೂ. ವೇತನ ಹೆಚ್ಚಾಗಿದ್ದು ಬಿ.ಎಂ.ಟಿ.ಸಿ.  ಹಾಗೂ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಒಟ್ಟು  1400 ಕೋಟಿ ರೂ. ಸಾಲವಿದೆ.  ಅಲ್ಲದೆ 473 ಕೋಟಿ ರೂ. ವೆಚ್ಚದಲ್ಲಿ ರಾಜ್ಯಾದ್ಯಂತ ಬಸ್‌ನಿಲ್ದಾಣಗಳ ಕಾಮಗಾರಿಯು ನಡೆಯುತ್ತಿದೆ.  ಆದ್ದರಿಂದ ಈಗಾಗಲೇ

ಸಂಸ್ಥೆಯು ಸಾಲದಲ್ಲಿರುವ ಹಿನ್ನೆಲೆಯಲ್ಲಿ ಬಸ್‌ದರವನ್ನು ಮತ್ತೊಮ್ಮೆ ಇಳಿಸಿದರೆ ಸಾರಿಗೆ ಇಲಾಖೆಯು ನಷ್ಟವನ್ನು ಅನುಭವಿಸಬೇಕಾಗುತ್ತದೆ ಎಂದರು.

ಕಳೆದ ಮೂರು ವರ್ಷಗಳಿಂದ ರಾಷ್ಟ್ರೀಕೃತ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ತನ್ನ ಬಂಡವಾಳ ವೆಚ್ಚಗಳಾದ ಬಸ್‌ಖರೀದಿ, ಬಸ್‌ನಿಲ್ದಾಣ ಮತ್ತು ಬಸ್ ಘಟಕ ನಿರ್ಮಾಣಕ್ಕಾಗಿ 136 ಕೋಟಿ ರೂ.ಗಳನ್ನು ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು 361 ಕೋಟಿ ರೂ.ಗಳನ್ನು ಸಾಲವನ್ನು ಪಡೆದಿವೆ ಎಂದು ಮಾಹಿತಿ ನೀಡಿದರು.

ಬಾಬು/ಬಿಜಿಪಿ/ಕೆಎಂ

## ಒಂದು ರೂಪಾಯಿ ರೆವಿನ್ಯೂ ಸ್ಟಾಂಪ್ ಜಾರಿಗೆ

ಬೆಂಗಳೂರು, ಫೆಬ್ರವರಿ ೨ (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಒಂದು ರೂಪಾಯಿ ರೆವಿನ್ಯೂ ಸ್ಟಾಂಪ್‌ಗಳಿಗೆ ಮಾನ್ಯತೆ ಇದೆ. ಒಂದು ರೂಪಾಯಿ ಸ್ಟಾಂಪ್ ಬಳಕೆಯನ್ನು 2003 ರ ಏಪ್ರಿಲ್ 1 ರಿಂದ ನಿಲ್ಲಿಸಲಾಗಿದ್ದು, 2014 ರ ಡಿಸೆಂಬರ್ 31 ರಿಂದ ಪುನರ್ ಬಳಕೆ ಮಾಡಲು ಆದೇಶಿಸಲಾಗಿದೆ ಎಂದು ಕಂದಾಯ ಸಚಿವ ಶ್ರೀ ವಿ. ಶ್ರೀನಿವಾಸ್ ಪ್ರಸಾದ್ ತಿಳಿಸಿದ್ದಾರೆ.

ಅವರು ಇಂದು ವಿಧಾನಸಭೆಯಲ್ಲಿ ಶ್ರೀ ಯಶವಂತರಾಯ ಗೌಡ ವಿಠ್ಠಲ ಗೌಡ ಪಾಟೀಲ್ ಮತ್ತು ಶ್ರೀ ಗೋಪಾಲಯ್ಯ. ಕೆ ಅವರ ಲಿಖಿತ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ನಕಲಿ ಛಾಪಾ ಕಾಗದದ ಹಗರಣದ ಹಿನ್ನೆಲೆಯಲ್ಲಿ ರೆವಿನ್ಯೂ ಸ್ಟಾಂಪ್ ಬಳಕೆಯನ್ನು ನಿಲ್ಲಿಸಲಾಗಿತ್ತು. ಇದರಿಂದ ಸಾರ್ವಜನಿಕರಿಗೆ ತೊಂದರೆಯಾದ ಹಿನ್ನೆಲೆಯಲ್ಲಿ ರೆವಿನ್ಯೂ ಸ್ಟಾಂಪ್‌ಗಳನ್ನು ಪುನರ್ ಬಳಸಲು ಆದೇಶಿಸಲಾಗಿದೆ. ಇದರಿಂದ ಅಂದಾಜು ವಾರ್ಷಿಕ 10 ಕೋಟಿ ರೂ. ಗಳ ಆದಾಯ ನಿರೀಕ್ಷಿಸಲಾಗಿದೆ. ಸಾರ್ವಜನಿಕರಿಗೆ ಮುಕ್ತವಾಗಿ ರೆವಿನ್ಯೂ ಸ್ಟಾಂಪ್‌ಗಳು ಲಭ್ಯವಾಗಲು ಹಿಂದಿನಂತೆ ಅಂಚೆ ಕಚೇರಿಗಳಲ್ಲಿ ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ ಎಂದು ಸಚಿವರು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಪಹೊ:ಬಾಬು:ಜಿಪಿಆರ್.

## ಕಟ್ಟಡ ಕಾರ್ಮಿಕರ ನಿಧಿ : 2544.73 ಕೋಟಿ ರೂ. ಸಂಗ್ರಹ

ಬೆಂಗಳೂರು, ಫೆಬ್ರವರಿ ೨ (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಕಟ್ಟಡ ಕಾರ್ಮಿಕರ ನಿಧಿಗಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಟ್ಟಡ ನಿರ್ಮಾಣಗಳ ವೆಚ್ಚದ ಮೇಲೆ ಶೇಕಡಾ 1 ರಷ್ಟು ದರದಲ್ಲಿ 2007 ರಿಂದ ಡಿಸೆಂಬರ್

2014 ರವರೆಗೆ ಒಟ್ಟು ರೂ 2544.73 ಕೋಟಿ ಗಳನ್ನು ಸುಂಕವಾಗಿ ಸಂಗ್ರಹ ಮಾಡಲಾಗಿದೆ ಎಂದು ಕಾರ್ಮಿಕ ಖಾತೆಯ ರಾಜ್ಯ ಸಚಿವ ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ ಅವರು ಇಂದು ವಿಧಾನಸಭೆಯಲ್ಲಿ ಉಡುಪಿ ಶಾಸಕ ಶ್ರೀ ಪ್ರಮೋದ್ ಮಧ್ವರಾಜ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

ಪಹೊ:ಬಾಬು:ಜಿಪಿಆರ್.

## ಬೆಂಗಳೂರು ನಗರ ವ್ಯಾಪ್ತಿಯಲ್ಲಿ 1,51,607 ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು

**ಬೆಂಗಳೂರು, ಫೆಬ್ರವರಿ ೨ (ಕರ್ನಾಟಕ ವಾರ್ತೆ)**

ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ 1,51,607 ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಈ ಮಹಿಳಾ ಕಾರ್ಮಿಕರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಕಾರ್ಮಿಕ ಖಾತೆಯ ರಾಜ್ಯ ಸಚಿವ ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ ಅವರು ವಿಧಾನಸಭೆಗೆ ಇಂದು ತಿಳಿಸಿದ್ದಾರೆ.

ಅವರು ಶಾಸಕ ಶ್ರೀ ಗೋಪಾಲಯ್ಯ ಕೆ ಅವರ ಪ್ರಶ್ನೆಗೆ ಲಿಖಿತ ರೂಪದಲ್ಲಿ ಉತ್ತರಿಸಿ ತಿಳಿಸಿದ್ದಾರೆ.

ಮಹಿಳಾ ಕಾರ್ಮಿಕರಿಗೆ ಬಿ.ಎಂ.ಟಿ.ಸಿ. ವತಿಯಿಂದ ಪ್ರತ್ಯೇಕ ಬಸ್ ವ್ಯವಸ್ಥೆ ಒದಗಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಇದಕ್ಕಾಗಿ ತಗಲುವ ವೆಚ್ಚವನ್ನು ಕಾರ್ಖಾನೆ ಮಾಲೀಕರು ಭರಿಸುವ ಬಗ್ಗೆ ಅವರೊಂದಿಗೆ ಚರ್ಚಿಸಲಾಗುತ್ತಿದೆ. ಉದ್ದೇಶಿತ ಯೋಜನೆಯನ್ನು ಜಾರಿಗೆ ತಂದ ನಂತರ ಎಲ್ಲಾ ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರಿಗೆ ಸೌಲಭ್ಯ ದೊರಕುತ್ತದೆ ಎಂದು ಸಚಿವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಪಹೊ:ಬಾಬು:ಜಿಪಿಆರ್.

## ರಾಜ್ಯದಲ್ಲಿ 43 ಹೊಸ ತಾಲ್ಲೂಕುಗಳ ರಚನೆಗೆ ಕ್ರಮ

**ಬೆಂಗಳೂರು, ಫೆಬ್ರವರಿ ೨ (ಕರ್ನಾಟಕ ವಾರ್ತೆ)**

2013–14 ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದಲ್ಲಿ 43 ಹೊಸ ತಾಲ್ಲೂಕುಗಳನ್ನು ರಚಿಸುವುದಾಗಿ ಘೋಷಿಸಲಾಗಿದೆ ಎಂದು ಕಂದಾಯ ಸಚಿವ ಶ್ರೀ ವಿ. ಶ್ರೀನಿವಾಸಪ್ರಸಾದ್ ಯಲಬುರ್ಗಾ ಕ್ಷೇತ್ರದ ಶಾಸಕ ಶ್ರೀ ಬಸವರಾಜರಾಯರೆಡ್ಡಿ ಅವರ ಪ್ರಶ್ನೆಗೆ ಇಂದು ವಿಧಾನಸಭೆಯಲ್ಲಿ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಘೋಷಿತ ಹೊಸ ತಾಲ್ಲೂಕುಗಳೆಂದರೆ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ, ರಂಬಕವಿ–ಬನಹಟ್ಟಿ ಮತ್ತು ಇಳಕಲ್, ಬೆಳಗಾವಿ ಜಿಲ್ಲೆಯ ನಿಪ್ಪಾಣಿ, ಮೂಡಲಗಿ ಮತ್ತು ಕಾಗವಾಡ, ಚಾಮರಾಜನಗರ ಜಿಲ್ಲೆಯ ಹನೂರು, ದಾವಣಗೆರೆ ಜಿಲ್ಲೆಯ ನ್ಯಾಮತಿ, ಬೀದರ್ ಜಿಲ್ಲೆ ಚಿಟ್ಟಗುಪ್ಪ, ಹುಲಸೂರು ಮತ್ತು ಕಮಲನಗರ, ಬಳ್ಳಾರಿ ಜಿಲ್ಲೆ ಕುರುಗೋಡು, ಕೊಟ್ಟೂರು ಮತ್ತು ಕಂಪ್ಲಿ, ಧಾರವಾಡ ಜಿಲೆಯ ಅಣ್ಣಿಗೇರಿ, ಆಳ್ನಾವರ ಮತ್ತು

ಹುಬ್ಬಳ್ಳಿ ನಗರ, ಗದಗ ಜಿಲ್ಲೆಯ ಗಜೇಂದ್ರ ಗಢ ಮತ್ತು ಲಕ್ಷ್ಮೇಶ್ವರ, ಕಲಬುರಗಿ ಜಿಲ್ಲೆಯ ಕಾಳಗಿ, ಕಮಲಾಪುರ ಮತ್ತು ಶಹಾಬಾದ್, ಯಾದಗಿರ್ ಜಿಲ್ಲೆಯ ಹುಣಸಗಿ, ಯಡ್ರಾವಿ, ವಡಗೆರ ಮತ್ತು ಗುರುಮಿಟ್ಕಲ್, ಕೊಪ್ಪ ಜಿಲ್ಲೆಯ ಕೂಕನೂರು, ಕನಕಗಿರಿ ಮತ್ತು ಕಾರಟಗಿ, ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಸಿರವಾರ, ಉಡುಪಿ ಜಿಲ್ಲೆಯ ಬ್ರಹ್ಮಾವರ ಮತ್ತು ಬೈಂದೂರು, ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆ ಮತ್ತು ಕಡಬ, ಬೆಂಗಳೂರು ನಗರ ಜಿಲ್ಲೆಯ ಯಲಹಂಕ ಹಾಗೂ ವಿಜಯಪುರ ಜಿಲ್ಲೆಯ ಬಬಲೇಶ್ವರ, ನಿಡಗುಂದಿ, ತಿಕೋಟ, ದೇವರಹಿಪ್ಪರಗಿ, ತಾಳಿಕೋಟೆ, ಚಡಚಣ ಮತ್ತು ಕೋಲ್ಹಾರ ಎಂದು ಸಚಿವರು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಪಹೊ:ಬಾಬು:ಜಿಪಿಆರ್.

## ತಾತ್ಕಾಲಿಕ ಅರ್ಹತಾ ಪಟ್ಟಿ ಪ್ರಕಟ

**ಬೆಂಗಳೂರು, ಫೆಬ್ರವರಿ ೨ (ಕರ್ನಾಟಕ ವಾರ್ತೆ)**

ದಿನಾಂಕ: 09-09-2014 ರಲ್ಲಿದ್ದಂತೆ ಸ್ನಾತಕೋತ್ತರ ಪದವಿ ಪಡೆದ ಪ್ರೌಢಶಾಲಾ ಶಿಕ್ಷಕರುಗಳ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ತಯಾರಿಸಿ ಇಲಾಖೆಯ ಅಂತರ್ಜಾಲ ಸಂಖ್ಯೆ www.pue.kar.nic.in ಲಿಂಕಿನ Bulletin Board ನಲ್ಲಿ ಪ್ರಕಟಿಸಲಾಗಿದೆ. ಸದರಿ ಅರ್ಹತಾ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ 04-03-2015 ನಿಗಧಿಪಡಿಸಿದೆ.

ಈ ತಾತ್ಕಾಲಿಕ ಅರ್ಹತಾ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗದ ಶಿಕ್ಷಕರು ಮಾತ್ರ ದಿನಾಂಕ 09-09-2014 ರವರೆಗೆ ಸ್ನಾತಕೋತ್ತರ ಪದವಿ ಪಡೆದುಕೊಂಡಿದ್ದಲ್ಲಿ ಅಂತಹ ಪ್ರೌಢಶಾಲಾ ಶಿಕ್ಷಕರುಗಳು ತಮ್ಮ ಅಂಕಪಟ್ಟಿಗಳನ್ನು ಮತ್ತು ಅಗತ್ಯ ಮಾಹಿತಿಗಳನ್ನು ಸಂಬಂಧಿಸಿದ ಶಾಲಾ ಕಾಲೇಜುಗಳ ಮುಖ್ಯಸ್ಥರಿಂದ ಅಥವಾ ಅಧಿಕಾರಿಗಳಿಂದ ನಿಗದಿ ನಮೂನೆಯಲ್ಲಿ ಅಗತ್ಯ ಮಾಹಿತಿಗಳೊಂದಿಗೆ ದಿನಾಂಕ 04-03-2015 ರ ಒಳಗಾಗಿ ಖುದ್ದಾಗಿ/ನೋಂದಣಿ ಅಂಚೆ ವಿಳಾಸ ಅಥವಾ ಇ-ಮೇಲ್ Commissioner. pue@gmail.com ಮೂಲಕ (ಶ್ರೀ ಪುಟ್ಟಯ್ಯ, ಉಪ ನಿರ್ದೇಶಕರು (ಆಡಳಿತ) ನಿರ್ದೇಶಕರ ಕಚೇರಿ, ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು, ಇವರಿಗೆ) ಸಲ್ಲಿಸಬೇಕು. ದಿನಾಂಕ 04-03-2015 ರ ನಂತರ ಬರುವ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ದಿನಾಂಕ 09-09-2014 ರ ಒಳಗಾಗಿ ಸ್ನಾತಕೋತ್ತರ ಪದವಿ ಪಡೆದ ಅಂಕಪಟ್ಟಿ ಅಥವಾ ಪರೀಕ್ಷಾ ಫಲಿತಾಂಶದ ಘೋಷಣಾ ದೃಢೀಕೃತ ಪಟ್ಟಿ ಇರುವ ಶಿಕ್ಷಕರು, ಮಾತ್ರ ದಿನಾಂಕ : 09-09-2014 ರವರೆಗೆ ತಯಾರಿಸಿದ ಅರ್ಹತಾ ಪಟ್ಟಿಗೆ ಸೇರಲು ಮಾಡಲು ಅರ್ಹರಿರುತ್ತಾರೆ.

ದಿನಾಂಕ 09-09-2014 ರವರೆಗೆ ಇರುವ ತಾತ್ಕಾಲಿಕ ಅರ್ಹತಾ ಪಟ್ಟಿ ಮತ್ತು ಇತರ ವಿವರಗಳು ಇಲಾಖೆಯ ಅಂತರ್ಜಾಲದಲ್ಲಿ ಲಭ್ಯವಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಪಹೊ:ಬಾಬು:ಜಿಪಿಆರ್.

## 1 ಕೋಟಿ 24 ಲಕ್ಷ ಪಡಿತರ ಚೀಟಿ ವಿತರಣೆ

**ಬೆಂಗಳೂರು, ಫೆಬ್ರವರಿ 9 (ಕರ್ನಾಟಕ ವಾರ್ತೆ)**

**ಇದುವರೆಗೆ ರಾಜ್ಯಾದ್ಯಂತ 1 ಕೋಟಿ 24 ಲಕ್ಷ ಫಲಾನುಭವಿಗಳಿಗೆ ಹೊಸ ಪಡಿತರ ಚೀಟಿಯನ್ನು ವಿತರಿಸಲಾಗಿದೆ ಎಂದು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ದಿನೇಶ್ ಗುಂಡೂರಾವ್ ಅವರು ಮಾಹಿತಿ ನೀಡಿದರು.**

**ವಿಧಾನ ಪರಿಷತ್‌ನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು 2013–14 ನೇ ಸಾಲಿನಲ್ಲಿ ಆನ್‌ಲೈನ್ ಮೂಲಕ 39,26,705 ಅರ್ಜಿಗಳು ಸ್ವೀಕೃತವಾಗಿದ್ದು, ಅದರಲ್ಲಿ 16,56,864 ಅರ್ಜಿಗಳು ವಿಲೇವಾರಿಯಾಗಿದ್ದು, ಇನ್ನು 22,69,984 ಅರ್ಜಿಗಳು ಪರಿಶೀಲನಾ ಹಂತದಲ್ಲಿದೆ ಎಂದು ತಿಳಿಸಿದರು.**

**ಅರ್ಜಿ ಜೊತೆಯಲ್ಲಿ ಮತದಾನದ ಗುರುತಿನ ಚೀಟಿ ಸಲ್ಲಿಸುವ ಕಾರಣ 5 ಲಕ್ಷ ಅರ್ಜಿಗಳನ್ನು ತಡೆ ಹಿಡಿಯಲಾಗಿದ್ದು ಪ್ರತಿ ತಿಂಗಳು 1 ರಿಂದ 2 ಲಕ್ಷ ಅರ್ಜಿಗಳನ್ನು ವಿಲೇಮಾಡುವ ಮೂಲಕ ಏಪ್ರಿಲ್ ಮಾಹೆಯ ಒಳಗೆ ಸಂಪೂರ್ಣವಾಗಿ ಪಡಿತರ ಚೀಟಿಯನ್ನು ವಿತರಿಸಲಾಗುವುದೆಂದರು.**

**ಉಡುಪಿ ಜಿಲ್ಲೆಯಲ್ಲಿ ಪಡಿತರ ಚೀಟಿ ವಿತರಣೆ ಕಾರ್ಯ ಶೇಕಡ 90 ರಷ್ಟು ಮುಕ್ತಾಯವಾಗಿದ್ದು, ಎಪಿಎಲ್ ನಿಂದ ಬಿಪಿಎಲ್‌ಗೆ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದಲ್ಲಿ ಅವರಿಗೂ ಬಿಪಿಎಲ್ ಕಾರ್ಡ್ ಅನ್ನು ವಿತರಿಸಲು ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.**

ಪಹೊ:ಬಿಜಿಪಿ:ಜಿಪಿಆರ್.

## ಜಾತಿವಾರು ಜನಗಣತಿಯಲ್ಲಿ ಉಪಜಾತಿ ಸೂಚಿಸಲು ಅವಕಾಶ

**ಬೆಂಗಳೂರು, ಫೆಬ್ರವರಿ 9 (ಕರ್ನಾಟಕ ವಾರ್ತೆ)**

ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಸಾಮಾಜಿಕ ಸಮಾನತೆಗಾಗಿ ಹಮ್ಮಿಕೊಳ್ಳಲಾಗಿರುವ ಜಾತಿವಾರು ಜನಗಣತಿಯಲ್ಲಿ ಉಪ ಜಾತಿಯ ಹೆಸರನ್ನು ಸೂಚಿಸಲು ಅವಕಾಶ ಒದಗಿಸಲಾಗಿದೆ ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವ ಹೆಚ್. ಆಂಜನೇಯ ಅವರು ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ವಿ.ಎಸ್. ಉಗ್ರಪ್ಪ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ರಾಜ್ಯದ ಎಲ್ಲ ವರ್ಗಗಳ ಮತ್ತು ಜಾತಿಗಳ ಸಾಮಾಜಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕ ಸ್ಥಿತಿಗತಿಗಳ ಕುರಿತು ಅಂಕಿ ಅಂಶಗಳನ್ನು ಪಡೆಯುವ ಸಲುವಾಗಿ 55 ಪ್ರಶ್ನೆಗಳನ್ನೊಳಗೊಂಡ ಸಮೀಕ್ಷಾ ಅನುಸೂಚಿಯನ್ನು ರಚಿಸಲಾಗಿದೆ ಎಂದರು.

ಪಾರದರ್ಶಕವಾಗಿ ಸಮೀಕ್ಷೆಯನ್ನು ನಡೆಸುವ ಸಲುವಾಗಿ 189 ಕೋಟಿ ರೂ ವೆಚ್ಚದಲ್ಲಿ ವಿವಿಧ ಹಂತದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ಶಾಲಾ ಶಿಕ್ಷಕರನ್ನು ಸಮೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದ್ದು, ಸಮೀಕ್ಷೆ ಕಾರ್ಯವು ಏಪ್ರಿಲ್ 11 ರಿಂದ ಪ್ರಾರಂಭವಾಗಿ ಏಪ್ರಿಲ್ 30 ಕ್ಕೆ ಮುಕ್ತಾಯಗೊಳ್ಳಲಿದೆ ಎಂದರು.

ಬ್ರಿಟಿಷರ ಕಾಲದಲ್ಲಿ ಮಾಡಲಾಗಿದ್ದ ಸಮೀಕ್ಷೆಯ ಆಧಾರದ ಮೇಲೆ ಇದುವರೆವಿಗೆ ಸವಲತ್ತುಗಳನ್ನು ನೀಡಲಾಗುತ್ತಿದೆ. ಈ ಜನಗಣತಿಯಲ್ಲಿ ಸರ್ವರ ಸಾಮಾಜಿಕ ಮತ್ತು ಶೈಕ್ಷಣಿಕ ವಿವರಗಳನ್ನೊಳಗೊಂಡಂತೆ ಪ್ರತಿಯೊಬ್ಬರ ಸಮಗ್ರ ಮಾಹಿತಿಯನ್ನು ಪಡೆಯಲಾಗುವುದು ಇದರಿಂದ ಹಿಂದುಳಿದ ವರ್ಗಗಳ ಜನರಿಗೆ ಮಾತ್ರವಲ್ಲದೆ ಸರ್ವ ಜನಾಂಗದ ಅಭಿವೃದ್ಧಿಗೆ ಪೂರಕವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯವಾಗುತ್ತದೆ ಎಂದು ಸಚಿವರು ತಿಳಿಸಿದರು.

ವಸತಿ ಇಲ್ಲದೆ ಜೋಪಡಿಯಲ್ಲಿ ವಾಸಿಸುವವರು ನಿವೇಶನ ಇಲ್ಲದವರ ಮಾಹಿತಿಯನ್ನು ಪಡೆಯುವ ಸಲುವಾಗಿ ಈ 55 ಪ್ರಶ್ನೆಗಳ ಜೊತೆಗೆ ಮತ್ತೂ ಐದಾರು ಪ್ರಶ್ನೆಗಳನ್ನು ಸೇರಿಸಲಾಗುತ್ತದೆ ಎಂದು ಸಚಿವರು ಸದಸ್ಯರ ಪ್ರಶ್ನೆಗಳಿಗೆ ಮಾಹಿತಿ ನೀಡಿದರು

ಪಹೊ/ಬಿಜಿಪಿ/ಕೆಎಂ

## ಖರೀದಿ ಕೇಂದ್ರ

**ಬೆಂಗಳೂರು, ಫೆಬ್ರವರಿ 9 (ಕರ್ನಾಟಕ ವಾರ್ತೆ)**

**2014–15 ನೇ ಸಾಲಿನ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರಾಗಿ ಬೆಳೆಗೆ ಕನಿಷ್ಟ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ 2000/– ಮತ್ತು ಮೆಕ್ಕೆ ಜೋಳಕ್ಕೆ ಪ್ರತಿ ಕ್ವಿಂಟಾಲ್‌ಗೆ ಬೆಂಬಲ ರೂ 1310/– ರ ದರದಲ್ಲಿ ನೇರವಾಗಿ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಂದ ಖರೀದಿಸಲು ರಾಜ್ಯ ಸರ್ಕಾರದ ಆದೇಶವಿದೆ.**

**ಅದರಂತೆ ರೈತರ ಅನುಕೂಲಕ್ಕಾಗಿ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ತಾಲ್ಲೂಕಿಗೆ ಟಿ.ಎ.ಪಿ.ಸಿ.ಎಂ.ಸಿ. ಯಾರ್ಡ್ ಮತ್ತು ಹೊಸಕೋಟೆ ತಾಲ್ಲೂಕಿನ ಶ್ರೀ ಕಂಠೇಶ್ವರ್ ಕಲ್ಯಾಣ ಮಂಟಪದಲ್ಲಿ ಖರೀದಿ ಕೇಂದ್ರಗಳನ್ನು ಮತ್ತು ಬೆಂಗಳೂರು ನಗರ ಜಿಲ್ಲೆಯ ಕೃಷ್ಣರಾಜಪುರ, ಕೆಂಗೇರಿ, ಯಲಹಂಕ ಮತ್ತು ಯಶವಂತಪುರಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ರೈತ ಬಾಂಧವರು ಗುಣಮಟ್ಟದ ರಾಗಿ ಮತ್ತು ಮೆಕ್ಕೆಜೋಳವನ್ನು 50 ಕೆ.ಜಿ. ಯ ಗೋಣಿಚೀಲದಲ್ಲಿ ಭರ್ತಿಮಾಡಿ ಖರೀದಿ ಕೇಂದ್ರಕ್ಕೆ ಒಯ್ಯುವಂತೆ ಮತ್ತು ಇದರ ಲಾಭವನ್ನು ಪಡೆದುಕೊಳ್ಳುವಂತೆ ಕೋರಿದೆ.**

**ಹೆಚ್ಚಿನ ಮಾಹಿತಿಗಾಗಿ ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರ ತಾಲ್ಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರನ್ನು ಅಥವಾ ಜಂಟಿ ಕೃಷಿ ನಿರ್ದೇಶಕರು ಬೆಂಗಳೂರು ಇವರನ್ನು ಸಂಪರ್ಕಿಸಬಹುದಾಗಿದೆ.**

**ಪಹೊ:ಬಾಬು:ಜಿಪಿಆರ್.**